# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂತೆಸರಗೂರು

## ಮೈಸೂರು ಜಿಲ್ಲೆ

ಇ-ಮೇಲ್ apmcsaragur@rediff mail.com
ಪಿನ್ ಕೋಡ್ – 571 121
ಜಿ.ಮೇಲ್ apmcsargur@gmail.com
ದೂರವಾಣಿ ಸಂಖ್ಯೆ: 08228-297209

ಮಾನ್ಯ ಶ್ರೀ.ಬಿ.ಪಿ.ಭಾಸ್ಕರ್, ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂತೆಸರಗೂರು ಇವರ ಅಧ್ಯಕ್ಷತೆಯಲ್ಲಿ **ದಿನಾಂಕ:28-02-2020** ರಂದು ಶುಕ್ರವಾರ ಬೆಳಿಗ್ಗೆ **11.00** ಘಂಟೆಗೆ ನಡೆದ ಸಮಿತಿ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು: 12**

01 ಶ್ರೀ ಬಿ.ಪಿ.ಭಾಸ್ಕರ್ – ಅಧ್ಯಕ್ಷರು
02 ಶ್ರೀಮತಿ ಮೀನಾಕ್ಷಿ – ಉಪಾಧ್ಯಕ್ಷರು
03 ಶ್ರೀ ಸಿದ್ದರಾಜು – ಸದಸ್ಯರು
04 ಶ್ರೀ ಡಿ.ಪಿ.ಮಹೇಶ್ – ಸದಸ್ಯರು
05 ಶ್ರೀಮತಿ ರತ್ನಮ್ಮ – ಸದಸ್ಯರು
06 ಶ್ರೀ ಜಗದೀಶ್(ಅಯ್ಯು) – ಸದಸ್ಯರು
07 ಶ್ರೀ ಹೊ.ಕೆ.ಮಹೇಂದ್ರ – ಸದಸ್ಯರು
08 ಶ್ರೀ ಮಹದೇವಪ್ಪ – ಸದಸ್ಯರು
09 ಶ್ರೀ ರಾಮಣ್ಣ – ಸದಸ್ಯರು
10 ಶ್ರೀ ಎಂ. ಮಂಜುನಾಥ್ – ಸದಸ್ಯರು
11 ಶ್ರೀ ಜವರನಾಯಕ – ಸದಸ್ಯರು
12 ಶ್ರೀ ಸಂತೋಷ್‌ಕುಮಾರ್ – ಸದಸ್ಯರು

**ಗೈರು ಹಾಜರಾದ ಸದಸ್ಯರು: – 01**

01 ಶ್ರೀಮತಿ ಸುಜಾತ – ಸದಸ್ಯರು

| | |
|---|---|
| ವಿಷಯ:01 | ದಿನಾಂಕ:10/01/2020ರ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ಒಪ್ಪುವ ವಿಚಾರ. |
| ತೀರ್ಮಾನ: | ದಿನಾಂಕ:10/01/2020ರ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ಒಪ್ಪಲಾಯಿತು. |
| ವಿಷಯ:02 | 2019ನೇ ಡಿಸಂಬರ್ ಹಾಗೂ 2020ನೇ ಜನವರಿ ಮಾಹೆಯ ಜಮಾ-ಖರ್ಚು ಪರಿಶೀಲಿಸುವ ವಿಚಾರ. |
| ತೀರ್ಮಾನ: | 2019ನೇ ಡಿಸಂಬರ್ ಹಾಗೂ 2020ನೇ ಜನವರಿ ಮಾಹೆಯ ಜಮಾ-ಖರ್ಚು ಪರಿಶೀಲಿಸಲಾಯಿತು. |
| ವಿಷಯ:03 | ಮಾನ್ಯ ನಿರ್ದೇಶಕರು, ಕೃ.ಮಾ.ಇ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಮಂ/4523-4733/ 2019-20 ದಿನಾಂಕ:03/10/2019ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನ ಮಾರಾಟ ವಹಿವಾಟಿನ ಮೇಲೆ ಸಂಗ್ರಹಿಸಲಾಗುವ ಮಾರುಕಟ್ಟೆ ಶುಲ್ಕ 10 ಪೈಸೆಯಷ್ಟನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ನಿರ್ವಹಿಸಲಾಗುವ " ಮಾರುಕಟ್ಟೆ ಸುಧಾರಣಾ ನಿಧಿಗೆ " ಜಮಾ ಮಾಡಲು ಅನುಮೋದನೆ ಪಡೆಯುವ ಕುರಿತು. |
| ತೀರ್ಮಾನ: | ಮಾನ್ಯ ನಿರ್ದೇಶಕರು, ಕೃ.ಮಾ.ಇ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಕೃಮಾಮಂ/4523-4733/ 2019-20 ದಿನಾಂಕ:03/10/2019ರ ಪತ್ರದಲ್ಲಿ ದಿನಾಂಕ:01/04/2017 ರಿಂದ ಅನ್ವಯವಾಗುವಂತೆ ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನ ಮಾರಾಟ ವಹಿವಾಟಿನ ಮೇಲೆ ಸಂಗ್ರಹಿಸಲಾಗುವ ಮಾರುಕಟ್ಟೆ ಶುಲ್ಕ 10 ಪೈಸೆಯಷ್ಟನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯು ನಿರ್ವಹಿಸಲಾಗುವ " ಮಾರುಕಟ್ಟೆ ಸುಧಾರಣಾ ನಿಧಿಗೆ " ಜಮಾ ಮಾಡುವಂತೆ ತಿಳಿಸಿರುವ ವಿಚಾರದ ಕುರಿತು ಸಮಿತಿ ಸಭೆಯಲ್ಲಿ ಚರ್ಚಿಸಿ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ: 04 | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಂತೆಸರಗೂರು, ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಸಮಿತಿ ನಿಧಿಯಿಂದ ಶುದ್ಧಕುಡಿಯುವ ನೀರಿನ ಘಟಕ ಹಾಗೂ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಅಪ್ರೋಚ್ ರಸ್ತೆಯ ಬಲಭಾಗದಲ್ಲಿ ಆರ್.ಸಿ.ಸಿ. ಡ್ರೈನ್ ಮತ್ತು ಡೆಕ್ ಸ್ಲಾಬ್ ನಿರ್ಮಾಣ ಕಾಮಗಾರಿಯ ರೇಖಾ ಅಂದಾಜು ಪಟ್ಟಿಯನ್ನು ಪರಿಶೀಲಿಸುವ ವಿಚಾರ. |

| | |
|---|---|
| ತೀರ್ಮಾನ: | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಸಂತೆಸರಗೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶುದ್ಧಕುಡಿಯುವ ನೀರಿನ ಘಟಕ ಹಾಗೂ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಅಪ್ರೋಚ್ ರಸ್ತೆಯ ಬಲಭಾಗದಲ್ಲಿ ಆರ್.ಸಿ.ಸಿ. ಡ್ರೈನ್ & ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತ ರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರುರವರ ಪತ್ರ ಸಂಖ್ಯೆ:ಕೃಮಾಇ:ಸಕಾನಿಅ(ಮೈ)/ ಅಂ.ಪಟ್ಟಿ(ಸಂತೆಸರಗೂರು)/846/2019-20 ದಿ:21/01/2020ನ್ನು ಸಮಿತಿ ಸಭೆಯಲ್ಲಿ ಕೂಲಂಕುಷ ವಾಗಿ ಪರಿಶೀಲಿಸಿ ಮಾರುಕಟ್ಟೆ ಪ್ರಾಂಗಣಕ್ಕೆ ಬರುವ ರೈತರು ಹಾಗೂ ಸಾರ್ವಜನಿಕರ ಅನುಕೂಲ ಕ್ಕಾಗಿ ಮೂಲಭೂತ ಸೌಕರ್ಯಗಳ ಯೋಜನೆಯಡಿಯಲ್ಲಿ ಶುದ್ಧಕುಡಿಯುವ ನೀರನ್ನು ಒದಗಿಸು ವುದು ಸಮಿತಿಯ ಆದ್ಯ ಕರ್ತವ್ಯವಾಗಿರುವುದರಿಂದ ಹಾಗೂ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪ ಮಾರುಕಟ್ಟೆ ಪ್ರಾಂಗಣದ ಅಪ್ರೋಚ್ ರಸ್ತೆಯ ಬಲಭಾಗದಲ್ಲಿ ಮಣ್ಣಿನ ಚರಂಡಿ ಇದ್ದು, ಪಕ್ಕದಲ್ಲಿ ಸಾರ್ವಜನಿಕ ಮನೆಗಳು ಇರುತ್ತವೆ. ಈ ಚರಂಡಿಯಲ್ಲಿ ಮಣ್ಣು ತುಂಬಿದ್ದು, ಪ್ರಸ್ತುತ ಚರಂಡಿಯ ಕೊಳಚೆ ನೀರು ಅಪ್ರೋಚ್ ರಸ್ತೆಯ ಮೇಲೆ ಹರಿಯುತ್ತಿದ್ದು, ಇದರಿಂದ ರೈತರು ಮತ್ತು ಸಾರ್ವಜನಿಕರಿಗೆ ತೊಂದರೆ ಯಾಗಿರುವುದರಿಂದ ಸಮಿತಿಯ ನಿಧಿಯಿಂದ ಈ ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ನಿರ್ದೇಶಕರಿಂದ ನಿಯಮಾನುಸಾರ ಮಂಜೂರಾತಿ ಪಡೆಯಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ: 05 | ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ಸರ್ಕಾರವು ಪುನರ್ ನಿಗಧಿಪಡಿಸಿರುವ ಬಗ್ಗೆ. |
| ತೀರ್ಮಾನ: | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ/ಅಭಿವೃದ್ಧಿ) ಅಧಿನಿಯಮ, 1966ರಡಿಯಲ್ಲಿ ರಾಜ್ಯ ಸರ್ಕಾರವು ಕೃಷಿ ಉತ್ಪನ್ನ ಬೆಳೆಗಾರರ ಹಿತರಕ್ಷಣೆಗಾಗಿ ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಿದ್ದು, ಪ್ರತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ನಿಗಧಿಪಡಿಸಿದೆ. ಅದರಂತೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಹಿತದೃಷ್ಟಿಯಿಂದ ಸಂತೆಸರಗೂರು ತಾಲ್ಲೂಕನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್.ಡಿ./104/ ಬಿಹೆಚ್. ಯೂಡಿ ಎಪಿಯೂ/2017, ದಿನಾಂಕ:22/01/2018ರಲ್ಲಿ ಸರಗೂರು ತಾಲ್ಲೂಕ್ಕಾಗಿ ರಚನೆಯಾಗಿರುತ್ತದೆ. ಅದರಂತೆ ಸಹಕಾರ ಸಚಿವಾಲಯದ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಇ 127 ಎಂಆರ್‌ಇ /2019 ಬೆಂಗಳೂರು ದಿ:17/12/2019ರಲ್ಲಿ ಹಾಲಿ ಗೊತ್ತುಪಡಿಸಿರುವ ಸಮಿತಿಯ ಮಾರುಕಟ್ಟೆ ಕ್ಷೇತ್ರ ಹೆಚ್.ಡಿ.ಕೋಟೆ ಮಾರುಕಟ್ಟೆ ಕ್ಷೇತ್ರವಾಗಿರುತ್ತದೆ. ಹೊಸ ತಾಲ್ಲೂಕು ರಚನೆ ಮೇರೆಗೆ ಪುನರ್ ನಿಗಧಿಪಡಿಸಿದ ಮಾರುಕಟ್ಟೆ ಕ್ಷೇತ್ರವಾಗಿ ಹೆಗ್ಗಡದೇವನ ಕೋಟೆ ತಾಲ್ಲೂಕು ಹಾಗೂ ಸರಗೂರು ತಾಲ್ಲೂಕು ಒಳಗೊಂಡ ಮಾರುಕಟ್ಟೆ ಕ್ಷೇತ್ರವನ್ನು ಸರ್ಕಾರವು ಪುನರ್ ನಿಗಧಿಪಡಿಸಿರುವುದನ್ನು ಸಮಿತಿ ಸಭೆಯಲ್ಲಿ ಪರಿಶೀಲಿಸಿ ಒಪ್ಪಲಾಯಿತು. |
| ವಿಷಯ:06 | ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು. |
| ವಿಷಯ:(1) | 2019-20ನೇ ಸಾಲಿನ ನಿಯಮ 71ರಡಿಯಲ್ಲಿ 03 ಸಂಖ್ಯೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರುರವರು ಕಳುಹಿಸಿಕೊಟ್ಟಿರುವ ಟೆಂಡರ್ ತುಲನಾತ್ಮಕ ತ:ಖ್ತೆಯನ್ನು ಪರಿಶೀಲಿಸಿ ಕಾರ್ಯಾದೇಶ ನೀಡುವ ವಿಚಾರ. |
| ತೀರ್ಮಾನ: | 1) ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2019-20ನೇ ಸಾಲಿನ ನಿಯಮ-71 ರಡಿಯಲ್ಲಿ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಉತ್ತರ-ದಕ್ಷಿಣ ಕಾಂಪೌಂಡ್ ಗೋಡೆಗೆ ಸುಣ್ಣ-ಬಣ್ಣ ಹಾಗೂ ತೆರೆದ ಮೂತ್ರಾಲಯಕ್ಕೆ ನೀರಿನ ಪೂರೈಕೆ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರು ತಮ್ಮ ಕಛೇರಿ ಪ.ಸಂಖ್ಯೆ: ಕೃಮಾಇ/ಸಕಾನಿಅ(ಮೈ)/ಆ.ಬಿಡ್‌ತು.ತ:ಖ್ತೆ ನಿಯಮ-71 2019-20(ಸಂ.ಸರಗೂರು) /982/2019-20 ದಿನಾಂಕ:27/02/2020 ರಲ್ಲಿ ಕಳುಹಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಿದ ಇಬ್ಬರು ಗುತ್ತಿಗೆದಾರರ ಪೈಕಿ ಶ್ರೀ ಸುರೇಶ್, |

ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾ: ರವರು ಸದರಿ ಅಭಿವೃದ್ಧಿ ಕಾಮಗಾರಿಗೆ 2018–19ನೇ ಶೆಡ್ಯೂಲ್'ಬಿ' ದರಗಳ ನಮೂದಿಸಿರುವ ಶೇ.1.19 ಹೆಚ್ಚಿನ ದರಗಳ ಮೊತ್ತ ರೂ.89,988.12 ಒಂದನೇ ಕಡಿಮೆ ದರವಾಗಿರುವುದಾಗಿ ಹಾಗೂ ಇವರ ಟೆಂಡರ್‌ಗೆ ಟೆಂಡರ್ ಪಾರದರ್ಶಕತೆ ನಿಯಮಾನುಸಾರ ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಗಳಂತೆ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದುಕೊಳ್ಳಲು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಸದರಿ ಕಾಮಗಾರಿಯನ್ನು ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು ರವರಿಗೆ ಕೆಲಸದ ಆದೇಶ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

2) ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2019–20ನೇ ಸಾಲಿನ ನಿಯಮ-71 ರಡಿಯಲ್ಲಿ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದ ಪೂರ್ವ-ಪಶ್ಚಿಮ ಕಾಂಪೌಂಡ್ ಗೋಡೆಗೆ ಸುಣ್ಣ-ಬಣ್ಣ ಬಳಿಯುವ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರು ತಮ್ಮ ಕಛೇರಿ ಪ.ಸಂಖ್ಯೆ: ಕೃಮಾಇ/ಸಕಾನಿಅ(ಮೈ)/ಆ.ಬಿಡ್‌ತು.ತ:ಖ್ತೆ ನಿಯಮ-71 2019–20(ಸಂ.ಸರಗೂರು)/981/2019–20 ದಿನಾಂಕ:27/02/2020 ರಲ್ಲಿ ಕಳುಹಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಿದ ಇಬ್ಬರು ಗುತ್ತಿಗೆದಾರರ ಪೈಕಿ ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾ: ರವರು ಸದರಿ ಅಭಿವೃದ್ಧಿ ಕಾಮಗಾರಿಗೆ 2018–19ನೇ ಶೆಡ್ಯೂಲ್'ಬಿ' ದರಗಳ ನಮೂದಿಸಿರುವ ಶೇ.1.21 ಹೆಚ್ಚಿನ ದರಗಳ ಮೊತ್ತ ರೂ.88,960.11 ಒಂದನೇ ಕಡಿಮೆ ದರವಾಗಿರುವುದಾಗಿ ಹಾಗೂ ಇವರ ಟೆಂಡರ್‌ಗೆ ಟೆಂಡರ್ ಪಾರದರ್ಶಕತೆ ನಿಯಮಾನು ಸಾರ ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಗಳಂತೆ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದುಕೊಳ್ಳಲು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಸದರಿ ಕಾಮಗಾರಿಯನ್ನು ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು ರವರಿಗೆ ಕೆಲಸದ ಆದೇಶ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

3) ಸಂತೆಸರಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2019–20ನೇ ಸಾಲಿನ ನಿಯಮ-71 ರಡಿಯಲ್ಲಿ ಯರಹಳ್ಳಿ ಹ್ಯಾಂಡ್‌ಪೋಸ್ಟ್ ಉಪಮಾರುಕಟ್ಟೆ ಪ್ರಾಂಗಣದಲ್ಲಿರುವ ಓವರ್‌ಹೆಡ್ ಟ್ಯಾಂಕ್‌ನ ಪ್ಲಾಟ್‌ಫಾರಂ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಮೈಸೂರು ರವರು ತಮ್ಮ ಕಛೇರಿ ಪ.ಸಂಖ್ಯೆ: ಕೃಮಾಇ/ಸಕಾನಿಅ(ಮೈ)/ಆ.ಬಿಡ್‌ತು.ತ:ಖ್ತೆ ನಿಯಮ-71 2019–20(ಸಂ.ಸರಗೂರು)/980/2019–20 ದಿನಾಂಕ:27/02/2020 ರಲ್ಲಿ ಕಳುಹಿಸಿರುವ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಟೆಂಡರ್‌ನಲ್ಲಿ ಭಾಗವಹಿಸಿದ ಇಬ್ಬರು ಗುತ್ತಿಗೆದಾರರ ಪೈಕಿ ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾ: ರವರು ಸದರಿ ಅಭಿವೃದ್ಧಿ ಕಾಮಗಾರಿಗೆ 2018–19ನೇ ಶೆಡ್ಯೂಲ್'ಬಿ' ದರಗಳ ನಮೂದಿಸಿರುವ ಮೊತ್ತ ರೂ.88,266.13 ಒಂದನೇ ಕಡಿಮೆ ದರವಾಗಿರುವುದಾಗಿ ಹಾಗೂ ಇವರ ಟೆಂಡರ್‌ಗೆ ಟೆಂಡರ್ ಪಾರದರ್ಶಕತೆ ನಿಯಮಾನುಸಾರ ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಗಳಂತೆ ಸಮಿತಿ ಮಟ್ಟದಲ್ಲಿ ಅನುಮೋದನೆ ಪಡೆದುಕೊಳ್ಳಲು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಸದರಿ ಕಾಮಗಾರಿಯನ್ನು ಶ್ರೀ ಸುರೇಶ್, ಗುತ್ತಿಗೆದಾರರು, ಹೆಬ್ಬಲಗುಪ್ಪೆ, ಹೆಚ್.ಡಿ.ಕೋಟೆ ತಾಲ್ಲೂಕು ರವರಿಗೆ ಕೆಲಸದ ಆದೇಶ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

| | |
|---|---|
| ಸಹಿ/- | ಸಹಿ/- |
| (ಎಸ್.ಸಂಗೀತಾ) | (ಬಿ.ಪಿ.ಭಾಸ್ಕರ್) |
| ಕಾರ್ಯದರ್ಶಿ | ಅಧ್ಯಕ್ಷರು |
| ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, |
| ಸಂತೆಸರಗೂರು. | ಸಂತೆಸರಗೂರು. |

"ನಕಲು"
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಸಂತೆಸರಗೂರು